# JAIN COLLEGE

463/465, 18th Main Road, SS Royal, 80 Feet Road, Rajarajeshwari Nagar,
Bangalore - 560 098

***Date: /02/2017*** **ವಿಷಯ: ಕನ್ನಡ**

***I PUC***

**ಮಾದರಿ ಸಿದ್ಧತಾ ಪರೀಕ್ಷೆ**

***Timings Allowed: 3 Hrs15Minutes*** ***Total Marks: 100***

**ಅ-ವಿಭಾಗ**

**I .ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ : 10x1=10**

1. ಅಕ್ಕನು ಹೇಳತೊಡಗುವ ತೊಡರು ಯಾವುದು?
2. ನಾಡಿಗೆ ಯಾರ ಕಾಟಕೊನೆಗೊಂಡಿದೆ?
3. ಅಮ್ಮಿ ಯಾವಾಗಲೂ ಏನನ್ನು ಧರಿಸುವಳು?
4. ಜೀವ ಉಳಿಯುವ ದಾರಿ ಯಾವುದು?
5. ವೈದ್ಯಾಧಿಕಾರಿ ಇಲ್ಲಿಯವರೆಗೆ ಯಾವರೀತಿಯ ನ್ಯಾಯವನ್ನು ಕಂಡಿರಲಿಲ್ಲ?
6. ಮಾಸ್ತರರು ಮನೆಯ ಮುಂದೆ ಬರೆಸಿ ಹಾಕಿದ ಬೋರ್ಡು ಯಾವುದು?
7. ಯಾರ ಶ್ರೇಯಸ್ಸಿಗಾಗಿ ಶಕುಂತಲೆ ಅರಮನೆಗೆ ಬಂದಿದ್ದಾಳೆ?

8 8 ಪಿಶಾಚಿಗಳು ಮನುಷ್ಯರನ್ನು ಯಾವುದರ ಮೂಲಕ ಪ್ರವೇಶಿಸುತ್ತವೆ?

9. ಬೋಳೇಶಂಕರನ ಹೊಟ್ಟೆನೋವು ಯಾವುದರಿಂದ ಮಾಯವಾಯಿತು?
10. ಸೈನಿಕರು ಯಾವುದಕ್ಕೆ ಜಯವಾಗಲಿ ಎಂದು ಹಾಡಿದರು?

**ಆ-ವಿಭಾಗ**

**II ಅ. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 4x2=8**

11. ಚೆನ್ನಯ್ಯನ ಗುಪ್ತಭಕ್ತಿ ಯಾವ ರೀತಿಯದು?
12. ಶಿಶುಮಕ್ಕಳು ನಾವು ಸತ್ತರೂ ಚಿಂತಿಲ್ಲ ಎನ್ನಲು ಕಾರಣವೇನು?
13. ಮಗುವಿನಲ್ಲಿ ಸಮನಿಸಬೇಕಾದ ಗುಣಗಳು ಯಾವುವು?
14. ಭ್ರೂಣಾವಸ್ಥೆಯ ಮಗುವು ಏಕೆ ಗಾಬರಿಗೊಂಡಿದೆ?
15. ಧರೆಯ ಮೇಲಿನ ನಡಿಗೆ ಹಾಗೂ ಕರೆಯುವ ಧ್ವನಿ ಕವಿಗೆ ಹೇಗೆ ಭಾಸವಾಗುತ್ತಿದೆ?

**ಆ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 3x2=6**

16. ರಾಹುಕಾಲ ,ಗುಳಿಕಕಾಲ ,ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು?
17. ಗೌತಮನ ಮನೋಲೋಕವನ್ನು ನಿರಂತರವಾಗಿ ದಹಿಸಿದ ಪ್ರಶ್ನೆಗಳು ಯಾವುವು?
18. ಅರಮನೆಗೆ ಯಾವ ಕಾರಣಕ್ಕಾಗಿ ಬಂದಿದ್ದೇನೆಂದು ಶಕುಂತಲೆ ಹೇಳುತ್ತಾಳೆ?
19. ಕಾಡಿನಲ್ಲಿ ಹುಲಿಗಳೆಲ್ಲಾ ದಿಕ್ಕಾಪಾಲಾಗಿ ಏಕೆ ಓಡಿದವು?

**ಇ. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ : 3x2=6**

20. ಬೆಟ್ಟದಮೇಲಿನ ದೇವತೆಯು ಬೋಳೇಶಂಕರನ ಅಣ್ಣ ಅತ್ತಿಗೆಯರಿಗೆ ಹೇಗೆ ಕಾಣಿಸುತ್ತದೆ?
21. ರಾಜಕುಮಾರಿಯ ಹೊಟ್ಟೆನೋವು ವಾಸಿಮಾಡುವವರಿಗೆ ಏನೇನು ಬಹುಮಾನ ಕೊಡುವುದಾಗಿ ಡಂಗುರ ಸಾರಿಸುತ್ತಾರೆ?
22. ಬೋಳೇಶಂಕರ ಹುಡುಗಿಯರಿಗೆ ಚೆನ್ನಕೊಟ್ಟಿದ್ದಕ್ಕೆ ಸಾವ್ಕಾರಣ್ಣ ಏನು ಹೇಳುತ್ತಾನೆ?
23. ಸೈತಾನನಿಗೆ ಮೊದಲ ಪಂಕ್ತಿಯ ಊಟ ನಿರಾಕರಿಸಿದ್ದು ಏಕೆ?

## ಇ-ವಿಭಾಗ

**III ಅ. ಕೆಳಗಿನ ಯಾವುದಾದರೂ ಎರಡು ವಾಕ್ಯಗಳನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 2x3=6**

24. ಆನಜಿವೆಂ ಪೃಥೆಯಜಿವಳ್
25. ಜನಕಂಗೆ ನಾವನ್ಯರಲ್ಲ
26. ಎಲ್ಲಿಂದ ಅಗೆಯ ಬೇಕೆಂದು ನಕಾಶೆ ಹುಡುಕುತ್ತಾರೆ.

**ಆ. ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 1x3=3**

27. ಇವನ್ನ ಸಾಕ್ಷಾತ್ ಗಾಂಧಿ ಅಂತ್ಲೇ ತಿಳ್ಕೊಂಡು ಬಿಟ್ರ.
28. ರಸ್ತೆಯಿಂದ ಏಳುವ ಧೂಳು ನನ್ನ ತಲೆಗೆ ತಾಕಬೇಕು.

**ಇ. ಕೆಳಗಿನ ಯಾವುದಾದರೂ ಒಂದು ವಾಕ್ಯವನ್ನು ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ: 1x3=3**

29. ಹೆಣ್ಣಿದ್ದ ಮನೆಯ ಸೌಭಾಗ್ಯವೇ ಬೇರೆ
30. ನಾವು ಜಗಳದ ಭಾಷೆ ಆಡಿದರೆ ಅವರು ಸ್ನೇಹದ ಭಾಷೆ ಆಡುತ್ತಾರೆ.

## ಈ-ವಿಭಾಗ

**IV ಅ. ಕೆಳಗಿನ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 3x4=12**

31. ಘಟ್ಟಿವಾಳಯ್ಯ ವೇಷಧಾರಿಗಳನ್ನು ಕೂಟದಿಂದ ಹೊರಗು ಎನ್ನಲು ಕಾರಣಗಳೇನು?
32. ಕರುಣಾಳು ರಾಘವನಲ್ಲಿ ತಪ್ಪಿಲ್ಲ ಎಂಬ ಸೀತೆಯ ನಿಲುವನ್ನು ವಿಶ್ಲೇಷಿಸಿ.
33. ಸರಸ್ವತಿಯ ಸಚಿವ ಮಂಡಲವನ್ನು ಕುರಿತು ಬರೆಯಿರಿ
34. ಮತ್ತೆ ಸೂರ್ಯ ಬರುತ್ತಾನೆ ಕವಿತೆಯ ಆಶಯವನ್ನು ಚರ್ಚಿಸಿ.

**ಆ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2x4=8**

35. ರಾಗಿಮುದ್ದೆ ಯಾವ ಬಗೆಯ ಸಾರುಗಳ ಜೊತೆ ಸೇರಿ ಎಂತಹ ರಸಾನುಭವವನ್ನು ಸೃಷ್ಟಿಸುತ್ತದೆ? ವಿವರಿಸಿ.
36. ಅವಳಿ ಮಕ್ಕಳ ಸಾವು ಮಾಸ್ತರರ ಬದುಕನ್ನೇ ಬದಲಾಯಿಸಿದ್ದು ಹೇಗೆ?
37. ಮೂರ್ಛೆ ಹೋದ ವಿಪ್ರನನ್ನು ನಾಪಿತನು ಹೇಗೆ ಸಂತೈಸಿದನು?

**ಇ. ಕೆಳಗಿನ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ : 2x4=8**

38. ತನ್ನ ಕನಸನ್ನು ಕುರಿತು ಬೋಳೇಶಂಕರ ಮಂತ್ರಿಗೆ ಹೇಳಿದ್ದೇನು?
39. ಬೋಳೇಶಂಕರ ತನ್ನ ಅಣ್ಣಂದಿರಿಗೆ ಸಿಪಾಯಿ ಮತ್ತು ನಾಣ್ಯಗಳನ್ನು ಮಾಡಿಕೊಡಲು ಏಕೆ ನಿರಾಕರಿಸುತ್ತಾನೆ?
40. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

## ಉ-ವಿಭಾಗ

**V ಅ. ಈ ಕೆಳಗಿನ ಯಾವುದಾದರೂ ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ: 1x5=5**

41. ಹರಿ ಬೇಡೆ ಕವಚಮಂ
ನರಿದಿತ್ತಯ್ ಕೊಂತಿ ಬೇಡೆ ಬೆಗಡದೆ ಕೊಟ್ಟಯ್
ಪುರಿಗಣೆಯಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತಿ.

42. ಧನ ಧನವೆನ್ನುವ ಧನದಾಹಿಗಳು
ಮಾರಿಕೊಂಡರು ಭೂಮಿಯನು
ಮಹಲಿನ ಬುಡದಲಿ ಬಿರುಕುಗಳೆದ್ದಿವೆ
ಕೇಳರು ಮಾರಿಯ ಸದ್ದನು.

**ಆ. ಭಾಷಾಭ್ಯಾಸ: ಈ ಕೆಳಗಿನ ಆರು ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ : 6x2=12**

43. ಈ ಪದಗಳ ಅರ್ಥ ಬರೆಯಿರಿ : ಕಾಂತಾರ, ಮುಗುಳು
44. ಈ ಪದಗಳನ್ನು ಬಿಡಿಸಿ ಬರೆಯಿರಿ: ಬನದೊಳಿರಿಸಿ, ಲೇಸಾಯ್ತು
45. ಈ ಪದಗಳ ಸಮಾನಾರ್ಥಕಗಳನ್ನು ಬರೆಯಿರಿ: ಕಣ್ಣು, ಕರಿ
46. ಈ ಪದಗಳ ತದ್ಭವ ರೂಪ ಬರೆಯಿರಿ: ಶೃಂಗಾರ, ಪ್ರಾಣ
47. ಈ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ: ಮುಖವಾಡ, ಚಾಟಿಯೇಟು
48. ಈ ಪದಗಳ ವಿರುದ್ಧಪದ ಬರೆಯಿರಿ: ಅಖಂಡ, ಉಚಿತ
49. ಯಾವುದಾದರೂ ಎರಡು ದ್ವಿರುಕ್ತಿಗಳನ್ನು ಬರೆಯಿರಿ:

**ಇ. ಕೆಳಗಿನ ಯಾವುದಾದರೂ ಒಂದಕ್ಕೆ ಪ್ರಬಂಧ ಬರೆಯಿರಿ: 1x5=5**

50. ಫ್ಯಾಷನ್ ಪ್ರಪಂಚ
51. ಯೋಗಾಭ್ಯಾಸದ ಮಹತ್ವ

**ಈ. ಕೆಳಗಿನ ಯಾವುದಾದರೂ ಒಂದನ್ನು ಕುರಿತು ಪತ್ರಲೇಖನ ಬರೆಯಿರಿ: 1x4=4**

52. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ವಾರ್ಷಿಕೋತ್ಸವ ಸಮಾರಂಭವನ್ನು ವಿವರಿಸುತ್ತಾ ನಿಮ್ಮ ತಾಯಿಗೆ ಪತ್ರ ಬರೆಯಿರಿ.
53. ನಿಮ್ಮ ಬಡಾವಣೆಯ ಕಸದ ಸಮಸ್ಯೆಯನ್ನು ಪರಿಹರಿಸುವಂತೆ ಕೋರಿ ಬೆಂಗಳೂರು ಮಹಾನಗರ ಪಾಲಿಕೆಯ ಆಯುಕ್ತರಿಗೊಂದು ಪತ್ರ ಬರೆಯಿರಿ

**ಉ. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ವಿಸ್ತರಿಸಿ. 1x4=4**

54. ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯ ಇಲ್ಲ.
55. ಮಾಡಿದ್ದುಣ್ಣೋ ಮಾರಾಯ

********************************